ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಪಾ.ಅ/ಯ.ವ/ಆ.ಅ/21 /24-25

ಕಾರ್ಯಪಾಲಕ ಅಭಿಯಂತರು(ವಿ)ರವರ ಕಛೇರಿ
ಬೃ.ಬೆಂ.ಮ.ಪಾ, ಯಲಹಂಕ ವಲಯ
ಬಳ್ಳಾರಿ ರಸ್ತೆ, ಬೆಂಗಳೂರು-92.
ದಿನಾಂಕ: 08/11/2024

ಆಡಳಿತಾತ್ಮಕ ಮಂಜೂರಾತಿ

ವಿಷಯ:- **Repairs and Replacements of damaged cables, poles, park fittings in Yelahanka Constituency Parks.**

ಉಲ್ಲೇಖ:- 1. ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)/ಪಿಆರ್/394/2021-22, ದಿನಾಂಕ:27.07.2021 ರ ಮೇರೆಗೆ
2. ಅಂದಾಜು ಮೊತ್ತ: ರೂ.40.00 ಲಕ್ಷಗಳು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ವಲಯರವರು ಈ ಕೆಳಗಿನ ಕಾಮಗಾರಿಗೆ 2024-25 ನೇ ಸಾಲಿನ ಅಯವ್ಯಯದ **ಲೆಕ್ಕ ಶೀರ್ಷಿಕೆ-P0298** ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಯಲಹಂಕ ವಲಯ ವಾರ್ಡ್ ಸಂಖ್ಯೆ 01 ರಿಂದ 04 ರ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉದ್ಯಾನವನಗಳಲ್ಲಿ ಹಾಳಾದ ಕೇಬಲ್ ಮತ್ತು ಕಂಬಗಳನ್ನು ದುರಸ್ತಿಗೊಳಿಸಿ ಬದಲಾಯಿಸುವ ಕಾಮಗಾರಿಗೆ ಪಿ.ಓ.ಡಬ್ಲ್ಯೂ ಯಡಿ. 2023-24 ವಿದ್ಯುತ್ (ಎಸ್.ಆರ್) ದರಗಳ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿದೆ. ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು 2024-25 ನೇ ಸಾಲಿನ ವಿದ್ಯುತ್ ಕ್ರಿಯಾ ಯೋಜನೆಯನ್ನು ಸದರಿ ಕಾಮಗಾರಿಯನ್ನು **"ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ನಡವಳಿಗಳು ವಿಷಯದ ಸಂಖ್ಯೆ:167/2024-25, ದಿನಾಂಕ:11.09.2024"** ರಲ್ಲಿ ಅನುಮೋದಿಸಿರುವ ಮೇರೆಗೆ ತಮ್ಮ ಅವಗಾಹನೆಗೆ ತರುತ್ತಾ, ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಉಲ್ಲೇಖ (01) ರಂತೆ ನೀಡಿರುವ ಅಧಿಕಾರದನ್ವಯ ಉಲ್ಲೇಖ (01) ರಂತೆ ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರು ತಾತ್ವಿಕ ಅನುಮೋದನೆ ನೀಡಿರುವ ಮೇರೆಗೆ ಈ ಮೇಲಿನ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯ ಮೆಮೋ ಪ್ರತಿಗೆ ಸಹಿಯನ್ನು ಮಾಡಿದೆ.

ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ- 142 to 143 ಕ್ರಮಸಂಖ್ಯೆ: 21 ರಲ್ಲಿ ನಮೂದಿಸಲಾಗಿದೆ. ಈ ಮೇಲ್ಕಂಡ ಅಂದಾಜುಪಟ್ಟಿಗೆ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಯೊಂದಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಷರತ್ತುಗಳು:-

1. ಅರಿದಾಜು ಪಟ್ಟಿಯ ಮೊತ್ತ ರೂ.1.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ಲಾಗ್ ಪುಸ್ತಕದಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ದಾಖಲೆ ರೂಪದಲ್ಲಿ ನಮೂದಿಸಿಕೊಳ್ಳುವುದು.
3. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೇಟಾ ದರವನ್ನು ತಯಾರಿಸಿ, ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಬೃ.ಬೆಂ.ಮ.ಪಾ. ಯಲಹಂಕ ವಲಯ

ಪ್ರತಿಯನ್ನು:

1. ಅಧೀಕ್ಷಕ ಅಭಿಯಂತರರು (ವಿ) ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಛೇರಿ ಕಡತಕ್ಕೆ.